ಕನ್ಯಾತ್ವಸ್ಯ ವಿವಾಹರಹಿತಸ್ತ್ರೀತ್ವಾ ವಚ್ಛಿನ್ನಸಾಧಾರಣ್ಯಾತ್ - ಕನ್ಯಾದಾನಂಚ ತತ್ಫಲಂಚ ಉಭಯತ್ರ ತುಲ್ಯಮೇವ - ಕೃಷ್ಣಾರ್ಪಣೇನಪರಮಫಲಮೇವ ಸಿಧ್ಯತಿ - ತಸ್ಮಾದೆತೋಕ್ತ ಕಾಲೋಚಿತ ಶಾಸ್ತ್ರೀಯ ಸುಕರತರ ವಿವಾಹಕರಣೆ ಬ್ರಾಹ್ಮಣಾಶ್ಚ ವೈಶ್ಯಾದಯಶ್ಚ ಸರ್ವೇಸರ್ವಪ್ರಕಾರೇಣ ಸುಖಿನೋಭವನ್ತಿ॥ **

ಸಂಪೂರ್ಣ.

ಣವೈಶ್ಯಾದಿಗಳೆಲ್ಲರೂ ಸರ್ವಪ್ರಕಾರದಿಂದಲು ಸುಖಿಸುವರು. * * * * * * * * * * * * * * * * * * * *

ಸಂಪೂರ್ಣ.

ಶ್ರೀ.

ಜಿನಧರ್ಮ ಗ್ರಂಥಮಾಲೆಯ

೧ ನೇ ಪುಸ್ತಕ.

# ಸತ್ಯವ್ರತ.

—:.o.:—

ಈ ಗ್ರಂಥವು

ಮೆ॥ ತವನಪ್ಪಾ ಪದ್ಮಪ್ಪಾ ಕಲಘಟಗಿ ಯವರಿಂದ

ರಚಿಸಲ್ಪಟ್ಟು,

ಮೊದಲನೇ ಛಾಪಾ

೧,೦೦೦ ಕಾಪಿಗಳು.

ಜಿ. ಎಲ್. ಎಕ್. ಪ್ರೆಸ್ಸಿನಲ್ಲಿ ಮುದ್ರಿಸಿ

ಪ್ರಕಟಿಸಲ್ಪಟ್ಟಿತು.

ಬೆಂಗಳೂರು.

1906ನೇ ಇಸ್ವಿ

ಶ್ರೀ ಜಿನಾಯ ನಮಃ.

# ಸತ್ಯ ವ್ರತ.

ಸ್ಥೂಲವಪ್ಪ ಹುಸಿಯನು ತಾ ನುಡಿಯನು।
ಹೇಳನನ್ಯರನು ನುಡಿಯೆಂದು।
ಚೇಳಾಗಿ ನುಡಿವರೊಡಂಬಡಿರ್ಪುದು।
ಕೇಳಿದೊಳ್ಳಿತು ಸತ್ಯವ್ರತವು ॥ ೧ ॥

ದ್ವಾದಶಾನುಪ್ರೇಕ್ಷ ॥

ಕನ್ಯಾಗೋಕ್ಷ್ಮಾಲೀಕ ಕೂಟಸಾಕ್ಷ್ಯನ್ಯಾಸಾಪಲಾಪವತ್ ।
ಸ್ಯಾತ್ಸತ್ಯಾಣುವ್ರತೀ ಸತ್ಯಮಪಿ ಸ್ವಾನ್ಯಾಪದೇ ತ್ಯಜನ್ ।೧।

ಆಶಾಧರಪಂಡಿತ.

ತಾತ್ಪರ್ಯ:—ಕನ್ಯೆ ಮುಂತಾದ ದ್ವಿಪದ ಸಂಬಂಧ [ದ್ವಿಪದ ಅಂದರೆ ಹುಡುಗ, ಹುಡುಗೆ, ಆಳು ಇ.] ದಿಂದ ಸುಳ್ಳಾಡುವದು ಆಕಳ ಮುಂತಾದ ಚತುಷ್ಪದ ಸಂಬಂಧ [ಚತುಷ್ಪದ ಅಂದರೆ ಎಮ್ಮೆ ಆಕಳು, ಆನೆ ಕುದುರೆ ಇ.] ದಿಂದ ಸುಳ್ಳಾಡುವದು ಭೂಮಿ ಮುಂತಾದ ಸ್ಥಾವ

Digitized by ROJA MUTHIAH RESEARCH LIBRARY



ರಮಾಲಿನ ಸಂಬಂಧ [ಸ್ಥಾವರ--ಹೊಲ, ಮನೆ ಗಿಡ ಇ.] ದಿಂದ ಸುಳ್ಳು ಮಾತಾಡುವದು ಜಂಗಮ ಮಾಲಿನ ಸಂಬಂಧ [ಕಾಳುಕಡಿ, ವಸ್ತ್ರಾಭರಣ] ದಿಂದ ಸುಳ್ಳುಮಾತಾಡುವದು ಉದ್ಯೋಗ ಸಂಬಂಧದಿಂದ ಸುಳ್ಳು ನುಡಿಯುವದು ಲಂಚದಿಂದಾಗಲಿ ದ್ವೇಷದಿಂದಲಾಗಲಿ ಸುಳ್ಳು ಸಾಕ್ಷಿ ಹೇಳುವದು ತನ್ನ ಹತ್ತರವಿಟ್ಟ ಇಡಗಂಟನ ಸಂಬಂಧದಿಂದ ಸುಳ್ಳು ನುಡಿಯುವದು ಅನ್ಯರಿಗೆ ಹುಸಿ ನುಡಿಯೆಂದು ಹೇಳುವದು ಅವರು ಸುಳ್ಳು ಮಾತಾಡಿದ್ದಕ್ಕೆ ಒಡಂಬಡುವದು ಮಾಡಬಾರದು. ಕೃತ-ಕಾರಿತ ಅನುಮೋದದಿಂದ ಸುಳ್ಳು ನುಡಿಯದೆ ಇರುವದು ಸತ್ಯವ್ರತವು.

## ಸತ್ಯವ್ರತದ ಭೇದಗಳು.

[೧] ಸತ್ಯ ಮಾತಾಡುವದು. [೨] ಸತ್ಯದಲ್ಲಿ ಸುಳ್ಳು ಬೆರಿಸಿ ಮಾತಾಡುವದು ಅಂದರೆ ಸತ್ಯಾಸತ್ಯವನ್ನಾಡುವದು. [೩] ಸುಳ್ಳಿನಲ್ಲಿ ಖರೆ ತನವನ್ನು ಕೂಡಿಸಿದಂತೆ ಮಾತಾಡುವದು ಅಂದರೆ ಅಸತ್ಯಾಸತ್ಯವನ್ನಾಡುವದು ಹೀಗೆ ಭೇದಗಳಿರುತ್ತವೆಂದು ಹೇಳುತ್ತಾರೆ.

ಸತ್ಯ ಮಾತನ್ನಾಡುವದು:—ಈ ಬಗ್ಗೆ ದ್ವಾದಶಾನುಪ್ರೇಕ್ಷೆಯಲ್ಲಿ ಹೇಳಿದ್ದು ಹ್ಯಾಗೆಂದರೆ:—

ಹಿತಮಿತ ಮೃದು ಮಧುರಗಳಪ್ಪ ವಚನವ।
ಸತತ ಸರ್ವಜನ ಹಿತದಾ ।

ಅತಿಚಲುವಪ್ಪ ನುಡಿಗಳನು ನುಡಿವುದು ।
ಪ್ರಥಮವ್ರತದ ರಕ್ಷಣಾರ್ಥಾ ॥ ೧ ॥

ರಾಜರು ಮನ್ನಿಸುವರು ಸರ್ವ ಜನಗಳು ।
ಪೂಜಿಸುವರು ದೇವನಿಚಯಾ ॥
ಓಜೆಯಿಂದ ಸಹಕಾರಿಗಳಾತಗೆ ।
ಈ ಜಗದೊಳಗೀಗ ನೋಡೀ ॥ ೨ ॥

ಧನವ ನಿಕ್ಷೇಪವ ನಿಡುವರಾತನಕೈಯು ।
ಘನವೇಕಾಂತ ಮಾಡುವರು ॥
ವಿನಯದಿ ಕರವ ಮುಗಿವರಲ್ಲಿ ಮುಂದಕೆ ।
ಘನತರ ಸ್ವರ್ಗವೆಯ್ದುವನೂ ॥ ೩ ॥

ಹುಸಿಗೆ ಸಮಾನವಾಗುವ ಪಾಪ ।
ಮತ್ತೊಂದು ವಸುಧೆಯೊಳಗೆ ಸಮನಿಲ್ಲ ॥
ಹುಸಿಯಿಂದ ಇಹಪರದಲಿ ಬಹುವಿಧಮಪ್ಪ ।
ವಿಷಮ ದುಃಖವ ನೆಯ್ದುವನು ॥ ೪ ॥

ಅಂಧ ಬಧಿರ ಮೂಕ ರೋಗಿಗಳಾಗಿಯೇ ।
ಕಾಕ ಮಾರ್ಜಾಲ ಖರಗಳು ॥
ಆಕಾರದ ಧ್ವನಿವುಳ್ಳವರಪ್ಪರು ।
ಲೋಕದೊಳಗೆ ಹುಸಿಯಿಂದಾ ॥ ೫ ॥

ನಿರುತ ಹುಸಿಯನಾಡುವ ಮನುಜರ ।
ಕಂಡು ಕಡುಮುಳಿವು ಲೋಕವೆಲ್ಲಾ ॥
ಅರಸು ಜಿಂಹ ಛೇದಾದಿ ದಂಡಣೆಯಿಂದ ।
ಉರುತರ ದುಃಖ ಮಾಡುವರು ॥ ೬ ॥



ತಾತ್ಪರ್ಯ:—ಹಿತವಾದ, ಮಿತವಾದ, ಮೃದುವಾದ, ಮಧುರವಾದ ವಚನಗಳನ್ನಾಡುವದು. ಸತ್ಯ ಮಾತಾಡುವವರಿಗೆ ರಾಜರು ಮನ್ನಿಸುವರು; ಸರ್ವಜನರು ಪೂಜಿಸುವರು; ಜನರು ಸಹಾಯಕಾರಿಗಳಾಗುವರು; ದುಡ್ಡಿನ ಇಡಗಂಟು ಇಡುವರು; ವಿನಯದಿ ಕೈ ಮುಗಿಯುವರು; ನಂಬಿಗೆ ಇಡುವರು; ಹಿತ ಬಯಸುವರು; ಅವರ ನುಡಿಗೆ ಹರ್ಷ ಮಾಡುವರು; ಅವರ ಮಾತು ಶ್ರೇಷ್ಠವೆಂದು ತಿಳಿಯುವರು. ಸಾರಾಂಶ ಪ್ರಾಮಾಣಿಕತನದಿಂದ ನುಡಿಯುವವರಿಗೆ ಸಂಪತ್ತಿನ ಖನಿಯೂ ಜ್ಞಾನದ ನಿಧಿಯೂ ಸಮಾಧಾನದ ಮನೆಯೂ ಸಿಕ್ಕುವದು.

ಅಸತ್ಯ ಮಾತಾಡುವವರಿಗೆ:—ಅರಸರು ದಂಡಿಸುವರು; ಜನರು ಮುಳಿವರು; ದೊಡ್ಡವರು ಹಳಿಯುವರು; ನಂಬಿಗೆ ಕಡಿಯುವರು; ಅವರ ಸುಳ್ಳುತನವನ್ನು ಪ್ರಸಿದ್ಧಿಸುವರು; ಅಮರ್ಯಾದೆ ಮಾಡುವರು; ಸುಳ್ಳುಗಾರನೆಂದು ನುಡಿಯುವರು; ಕಾರಣ ನೋಡಿಕೊಂಡು ಸಹಾಯ ಮಾಡುವರು; ಸಂಕಟ ಕಾಲದಲ್ಲಿ ನೆರವಾಗರು; ಮಕ್ಕಳು ಅವರ ಸುಳ್ಳುನಡತೆ ಕಲಿಯುವರು; ಹುಸಿಯಿಂದ ಇಹಪರದಲ್ಲಿ ಬಹುವಿಧವಾದ ದುಃಖವನ್ನು ಹೊಂದುವರು; ಕುರುಡ, ಕಿವಡ, ಮೂಕ ರೋಗಿಗಳಾಗುವರು; ಹಾಗೆ ಬೆಕ್ಕುಗಳ ಧ್ವನಿಯುಳ್ಳವರಾಗುವರು. ಪರರಿಗೆ ಹಾನಿಯುಂಟುಮಾಡಿ ತಮಗೆ ಹಿತವಮಾಡಿಕೊಳ್ಳ

Digitized by ROJA MUTHIAH RESEARCH LIBRARY

ಬೇಕೆಂದು ಚಿಂತಿಸಿದರೆ, ಯಾವದಾದರೂ ಮಾತು ವರ್ಣಿಸಿದಂತೆ ಹೇಳದಿದ್ದರೆ, ಯಾರಿಗಾದರೂ ಮೋಸವಾಗುವಂತೆ ಏನಾದರೂ ಮಾಡಿದರೆ, ಏನಾದರೂ ಕೆಲಸ ಮಾಡುತ್ತೇನೆಂದು ಒಪ್ಪಿಕೊಂಡು ಅದನ್ನು ಮಾಡದಿದ್ದರೆ ಸುಳ್ಳು ಮಾತಾಡಿದಹಾಗೆ ಆಗುತ್ತದೆ. ಸಾರಾಂಶ:—“ಸತ್ಯಂ ನಾಸ್ತಿ ತಪೋನಾಸ್ತಿ ನಾಸ್ತಿಪಂಚೇಂದ್ರಿಯನಿಗ್ರಹ” ಈ ಪರಿಣಾಮವುಳ್ಳವರಿಗೆ ನರಕಗತಿ ಪ್ರಾಪ್ತಿಯಾಗುತ್ತದೆಂದು ಫಲಶ್ರುತಿ ಹೇಳುತ್ತಾರೆ.

ಸತ್ಯಾಸತ್ಯವನ್ನಾಡುವದು:—ಸತ್ಯಾಶ್ರಿತ ವಚನಗಳು ಅಂದರೆ “ಎಲೋ ಜೇಡನೇ! ವಸ್ತ್ರವನ್ನು ನೆಯ್ಯು,” ಎಂಬ ವಾಕ್ಯದೊಳಗಿನ ನೆಯುವ ಕ್ರಿಯೆಯು ವಸ್ತ್ರದ ಮೇಲಾಗದೆ ನೂಲಿನಮೇಲೆ ಆಗುತ್ತಿರುತ್ತದೆ. ವಸ್ತ್ರ ಸಂಬಂಧದಿಂದ ಹೀಗೆ ಮಾತಾಡುವದು ಅಸತ್ಯದ ಹಾಗಿದ್ದರೂ ಲೋಕವ್ಯವಹಾರ ರೂಢಿ ಇದ್ದದರಿಂದ ಅದು ಸುಳ್ಳೆಂದು ಎಣಿಸಲ್ಪಡುವದಿಲ್ಲ. ಇದರಂತೆ “ಎಲೋ ನೀನು [ಅಡಿಗೆಯವನಿಗೆ] ಅನ್ನವನ್ನು ಕುದಿಸು” ಎಂಬ ವಾಕ್ಯದೊಳಗಿನ ಕುದಿಸುವ ಕ್ರಿಯೆಯು ಅನ್ನದ ಮೇಲಾಗದೆ ಅಕ್ಕಿಯ ಮೇಲಾಗಿರುತ್ತದೆ. ತಾತ್ಪರ್ಯ:—ಇಂಥ ಸತ್ಯಾಶ್ರಿತ ಅಸತ್ಯಭಾಷಣ [ಸತ್ಯಾಸತ್ಯ] ವನ್ನಾಡುವದು ಲೋಕವ್ಯವಹಾರ ರೂಢಿಯಿರುವದರಿಂದ ಸತ್ಯವ್ರತದ ಹಾನಿಯಾಗುವದಿಲ್ಲ.



ಅಸತ್ಯಾಸತ್ಯ ಮಾತುಗಳನ್ನಾಡುವದು:—ಯಾವದೊಂದು ಪದಾರ್ಥವು ತನ್ನದು ಅಲ್ಲ. ಮತ್ತು ಅದು ತನ್ನ ಹತ್ತಿರಸಹಾ ಇರುವದಿಲ್ಲ. ಇಂಥ ಪದಾರ್ಥವನ್ನು ನಾನು ನಾಳೆ ಮುಂಜಾನೆ ನಿನಗೆ ನಿಶ್ಚಯವಾಗಿ ಕೊಡುತ್ತೇನೆಂದು ಹೇಳುವದು ಅಸತ್ಯಾಸತ್ಯ ಭಾಷಣವಾಗುವದು. ಆದ್ದರಿಂದ ಇಂಥ ಲೋಕವ್ಯವಹಾರವಿರುದ್ಧವಿರುವ ಮಾತುಗಳನ್ನಾಡಿದರೆ ಸತ್ಯವ್ರತದ ಹಾನಿಯಾಗುತ್ತದೆ.

## ಸತ್ಯವ್ರತದ ಭಾವನೆಗಳು.

ಸಿಟ್ಟು, ಕೃಪಣತನ, ಭಯ, ಹಾಸ್ಯ, ನಿರರ್ಥಕ, ಮಾತು ವಂಚಕತನ, ಆಲಸ್ಯತನ ಮುಂತಾದ ಭಾವನೆಗಳು ಹುಸಿಯನ್ನು ಹುಟ್ಟಿಸುತ್ತವೆ. ಇವುಗಳುಂಟಾದರೆ ಖರೆಮಾತು ಹೊರಡುವದಿಲ್ಲ. ಏಕೆಂದರೆ ಸಿಟ್ಟುಬಂತೆಂದರೆ “ಶೇಷಂಕೋಪೇನ ಪೂರಯೇತ್” ಎಂಬಂತೆ ಸಿಟ್ಟಿನಬರದಲ್ಲಿ ಆಡಬಾರದ ಮಾತುಗಳನ್ನಾಡಿ ಬಿಡುವನು. ಲೋಭವೆಂದರೆ ಕೇವಲ ಸ್ವಾರ್ಥವು. ಸ್ವಾರ್ಥವು ಸುಳ್ಳಿನ ತವರಮನೆಯು ಇರುತ್ತದೆ. “ಲೋಭಮೂಲಾನಿ ಪಾಪಾನಿ” ಲೋಭವು [ಜೀನತನ] ಅತಿ ಕೆಟ್ಟದ್ದು. ಅದು ಪಾಪೋತ್ಪತ್ತಿಯ ಮೂಲವಿರುತ್ತದೆ. ಶಿಕ್ಷೆ ಭಯದಿಂದಾಗಲಿ ಎಷ್ಟೋ ಜನರು ಸುಳ್ಳು ಮಾತುಗಳ

ನ್ನಾಡುವರು. ಚೇಷ್ಟೆ ಹುಡಿಗಾಟಿಕೆಗಳ ಮೇಲೆ ಹಾಕಿ ಎಷ್ಟೋ ಜನರು ಸುಳ್ಳು ಬುರಡಿ ಹುಟ್ಟಿಸುವರು. ಹರಟೆ ಕೊಚ್ಚುವದರಲ್ಲಿ ಸುಳ್ಳು, ಪರನಿಂದೆ, ಆತ್ಮಸ್ತುತಿ ಇದ್ದದ್ದೇ ಸರಿ. ಆದ್ದದರಿಂದ ಸತ್ಯವ್ರತದ ಸ್ಥಿತೀಕರಣಾರ್ಥವಾಗಿ ಈ ಭಾವನೆಗಳನ್ನು ಬಿಡಬೇಕು,

## ಸತ್ಯಭಾಷೆಯು ನವಿನಾತಿಗಳು.

೧ ಮಾತಾಡುವದು ಅವಶ್ಯವಾಗಿ ತೋರಿದರೆ ಮಾತ್ರ ಮಾತಾಡಬೇಕು. ಸುಮ್ಮನೆ ಏನಾದರೊಂದು ಮಾತಾಡಬಾರದು.

೨ ಮಾತುಗಳು ದಿಟವಾಗಿರಬೇಕು; ಸಟೆಯಾಗಿರಬಾರದು.

೩ ಮಾತಿನಲ್ಲಿ ಪರಹಿತವಿರಬೇಕು; ಪರಪೀಡೆ ಇರಬಾರದು.

೪ ಮಾತುಗಳು ಬೋಧಪರವಿರಬೇಕು; ನಿಂದೆಪರ ಇರಬಾರದು.

೫ ಮಾತುಗಳು ಮಿತಿಯಾಗಿರಬೇಕು; ಬಹು ಭಾಷೆ ಇರಬಾರದು.

೬ ಮಾತುಗಳು ಮೃದುವಾಗಿರಬೇಕು; ಕಠಿಣವಾಗಿರಬಾರದು.

೭ ಮಾತುಗಳು ಶೀಯಾಗಿರಬೇಕು; ಕಡು (ವಿಷ) ವಿರಬಾರದು.

೮ ಮಾತುಗಳು ಸುಪಾಚ್ಯವಿರಬೇಕು; ಕೀಳು ನುಡಿಗಳು ಇರಬಾರದು.



೯ ಮಾತಾಡುವಾಗ್ಗೆ ಸಹಜವಾಗಿ ಮಾತಾಡಬೇಕಲ್ಲದೆ ಬಣಡೌಲಿನ ಅಂಶವಿರಬಾರದು.

೧೦ ಎಲ್ಲರಿಗೂ ಕೇಳಿಸುವಂತೆ ಮಾತಾಡಬೇಕು; ಆದರಲ್ಲಿ ಸ್ವಂತ ಸಂಬಂಧವು ಎಷ್ಟುಮಾತ್ರವೂ ಇರಬಾರದು.

೧೧ ನಿಮ್ಮ ವಿಚಾರಗಳು ಯಾವಾಗಲೂ ಚಲೋಪಿಯುವಂತೆ ಯತ್ನಿಸಬೇಕು. ಮುಗಾಲೋಚನೆಗಳಿಗೆ ಇಂಬುಗೊಡಬಾರದು.

೧೨ ಮಾತಾಡುವಾಗ್ಗೆ ವಿನಯದಿಂದ ಮಾತಾಡಬೇಕಲ್ಲದೆ ಎರಡನೆಯವರಕ್ಕಿಂತ ಮೇಲಾಗಬೇಕೆಂದು ಹವಣಿಕೆಯನ್ನು ಹಿಡಿಬಾರದು.

೧೩ ಮಾತಾಡುವಾಗ್ಗೆ ನಿರ್ಮಲ ಮನಸ್ಸಿನಿಂದಲೂ ಸ್ಪಷ್ಟೋಕ್ತಿಗಳಿಂದಲೂ ಮಾತಾಡಬೇಕು. ಕಪಟದ ನುಡಿಗಳಿರಬಾರದು.

೧೪ ಸ್ವಲ್ಪ ಮಾತಿನಿಂದ ಬಹಳ ಅರ್ಥವಾಗುವಂತೆ ಮಾತಾಡಬೇಕಲ್ಲದೆ ತಮ್ಮ ರಗಳೆಯನ್ನು ಬಿಚ್ಚಬಾರದು.

೧೫ ಕ್ಷುಲ್ಲಕವಾದ ವಿಷಯದಮೇಲೆ ಮಾತಾಡಿ ತಮ್ಮ ಮತ್ತು ಪರರ ವೇಳೆಯನ್ನು ವ್ಯರ್ಥವಾಗಿ ಕಳಿಯಬಾರದು.

೧೬ ಮಾತಾಡುವಾಗ್ಗೆ ಬಹಳ ಜಪ್ಪಿಸಿ ಎಚ್ಚರದಿಂದ ಮಾತಾಡಬೇಕು ಬಾಯಿಗೆ ಬಂದಂತೆ ಮಾತಾಡಬಾರದು

೧೭ ಬೇರೆ ಯಾರಾದರೂ ಅಸಂಬದ್ಧ ಭಾಷಣವನ್ನು ಮಾಡುತ್ತಿದ್ದರೆ ಅದನ್ನು ಸುಮ್ಮನೆ ಕೂತು ಕೇಳಬೇಕು ಇತ್ತಂಡವಾದಿತನ ನಡಿಸಬಾರದು.

Digitized by ROJA MUTHIAH RESEARCH LIBRARY

೧೮ ನಿಮ್ಮ ಭಾಷಣವು ಕೇಳುವವರಿಗೆ ಅನುಗುಣವಾಗಿರಬೇಕು. ಅಂದರೆ ವ್ಯಾಪಾರಿ ಬಂದರೆ ವ್ಯಾಪಾರಸಂಗತಿ, ಒಕ್ಕಲಿಗನು ಬಂದರೆ ಒಕ್ಕಲತನಸಂಗತಿ ಮಾತಾಡಬೇಕು. ಪ್ರತಿಕೂಲವಾಗಿರಬಾರದು.

೧೯ ಕೂಡಿದ ಜನರಲ್ಲಿ ಯಾರೊಬ್ಬರು ಮತ್ತೊಬ್ಬರ ನಿಂದೆಯನ್ನು ಮಾಡಹತ್ತಿದರೆ ಹಾಗೆ ಮಾಡಬಾರದೆಂದು ಅವರಿಗೆ ಸಾಮ್ಯ ಶಬ್ದಗಳಿಂದ ಹೇಳಬೇಕು. ಅದು ನಡಿಯದಿದ್ದರೆ ಸ್ವತಃ ಮೌನದಿಂದ ಕೂಡ್ರಬೇಕು. ಅದು ಸರಿ ಬೀಳದಿದ್ದರೆ ಅಲ್ಲಿರಬಾರದು

೨೦ ನೆರೆದ ಜನರೊಳಗಿನ ಮಾತು ಕಟ್ಟಾದರೆ ಎಲ್ಲರಿಗೂ ಮಾತಾಡಲಿಕ್ಕೆ ಬರುವಂಥ ಯಾವದೊಂದು ಹೊಸ ವಿಷಯವನ್ನು ತೆಗಿಯಬೇಕು.

೨೧ ಬೋಧಪರವಾದ ಸಂಗತಿಗಳು ದೊರೆತರೆ ನಿಮ್ಮ ಟಿಪ್ಪಣೀ ಪುಸ್ತಕದಲ್ಲಿ ಬರದಿಡಬೇಕು.

## ಸತ್ಯವ್ರತದ ಅತಿಚಾರಗಳು.

ಮಿಥ್ಯಾಉಪದೇಶ, ರಹೋಭ್ಯಾಖ್ಯಾ, ಕೂಟಲೇಖಕ್ರಿಯಾ, ನ್ಯಾಸಾಪಹಾರ, ಮಂತ್ರಭೇದ ಇವುಗಳಿಗೆ ಸತ್ಯವ್ರತದ ಅತಿಚಾರವೆನ್ನುತ್ತಾರೆ.

ಮಿಥ್ಯಾ ಉಪದೇಶ:— ಯಾವನೊಬ್ಬ ಮನುಷ್ಯನು ಯಾವದೊಂದು ಸಂಗತಿಬಗ್ಗೆ ಸಂಶಯ ಬಂದು ಕೇಳಿದರೆ ಅದರ ಬಗ್ಗೆ ತನಗೆ ಗೊತ್ತಿದ್ದು ಇಲ್ಲದ್ದೊಂ



ದು ಹೇಳುವದು, ತನಗೆ ಹಿತವಾಗಬೇಕೆಂಬ ಬುದ್ಧಿಯಿಂದ ಸುಳ್ಳು ಉಪದೇಶ ಮಾಡಿ ಮೋಸಗೊಳಿಸುವದು. ವ್ಯವಹಾರದಲ್ಲಿ ಸರಕಿನ ಗುಣದೋಷಗಳನ್ನು ಮುಚ್ಚಿಟ್ಟು ಆ ಜಿನಸಿನಲ್ಲಿಲ್ಲದ ಗುಣವರ್ಣಿಸುವದು. ಮಿಥ್ಯಾ ಉಪದೇಶವೆಂಬ ೧ನೇ ಅತಿಚಾರವು.

ರಹೋಭ್ಯಾಖ್ಯಾ:—ರಾಜಕಾರ್ಯ ಸಂಬಂಧವಾದ ಗುಪ್ತಮಾತುಗಳನ್ನು ಸ್ತ್ರೀ ಪುರುಷರ ಸಂಬಂಧವಾದ ಗುಪ್ತ ಮಾತುಗಳನ್ನು ವ್ಯಾಪಾರ—ಉದ್ಯೋಗಗಳ ಸಂಬಂಧವಾದ ಗುಪ್ತ ಮಾತುಗಳನ್ನು ಒಡಿಯುವದು ಪ್ರಸಿದ್ಧಮಾಡುವದು ಚಿನ್ಹಗಳಿಂದ ತಿಳಿಸುವದು ರಹೋಭ್ಯಾಖ್ಯಾವೆಂಬ ೨ನೇ ಅತಿಚಾರವು.

ಕೂಟಲೇಖಕ್ರಿಯಾ:—ಯಾವನೊಬ್ಬನು ಮಾತಾಡದ ಅಥವಾ ಮಾಡದ ವ್ಯವಹಾರವನ್ನು ಅವನು ಮಾತಾಡಿದ್ದಾನೆ ಅಥವಾ ಮಾಡಿದ್ದಾನೆಂದು ತಿಳಿದು ಎರಡನೇಯವರು ಹೇಳಿದ್ದರಮೇಲಿಂದ ಪರರ ವಂಚಿಸುವದಕ್ಕೋಸ್ಕರ ಕಪಟ ಬರವಣಿಗೆ ಮಾಡುವದು ಎರಡನೇಯವರ ಅಕ್ಷರದಹಾಗೇ ಅಕ್ಷರ ಬರೆದು ಅವರಿಗೆ ಹಾನಿಯನ್ನುಂಟುಮಾಡುವದು ಕೂಟಲೇಖಕ್ರಿಯಾವೆಂಬ ೩ನೇಯದು ಅತಿಚಾರವು.

ನ್ಯಾಸಾಪಹಾರ:—ಯಾವನೊಬ್ಬನು ಬಂಗಾರ, ಬೆಳ್ಳಿ, ಅಥವಾ ಇತರ ಒಡವೆಗಳನ್ನು ತನ್ನಲ್ಲಿಟ್ಟವನ್ನು

Digitized by ROJA MUTHIAH RESEARCH LIBRARY

ಮರೆತರೆ ಅಥವಾ ಕಡಿಮೆ ಬೇಡಿದರೆ ಅದರಬಗ್ಗೆ ನೆನಪು ಕೊಡದೆ ಅವುಗಳನ್ನು ಅಪಹರಿಸುವದಕ್ಕೋಸ್ಕರ ವಸ್ತುಗಳ ಸಂಖ್ಯಾದಿಗಳನ್ನು ಕಡಿಮೆ ಹೇಳುವದು ನ್ಯಾಸಾಪಹಾರವೆಂಬ ೪ನೇ ಅತಿಚಾರವು.

ಮಂತ್ರಭೇದ:—ಗುರುತಿನ ಚಿನ್ಹಗಳಿಂದಾಗಲಿ ಅಥವಾ ಹುಬ್ಬು ಹಾರಿಸೋಣ ಮುಂತಾದ ಸಾಧನಗಳಿಂದಾಗಲಿ ಎಂಡನೇಯುವರ ಅಭಿಪ್ರಾಯ ತಿಳಿದು ಅದನ್ನು ದುಷ್ಟತನದಿಂದ ಪರರಿಗೆ ಹೇಳುವದು ಮಂತ್ರಭೇದವೆಂಬ ೫ನೇ ಅತಿಚಾರವು.

ಈ ಪ್ರಕಾರ ಸತ್ಯವ್ರತವನ್ನು ಹೇಳಿ ಶ್ರೀ ಜಿನೇಶ್ವರನಿಗೆ ನಮಸ್ಕಾರಮಾಡಿ ಈ ಲೇಖವನ್ನು ಮುಗಿಸುತ್ತೇನೆ.

ಸಂಪೂರ್ಣ.

Digitized by ROJA MUTHIAH RESEARCH LIBRARY



ಶ್ರೀಮನ್ಮಹಾರಾಜ ಶ್ರೀಚಾಮರಾಜೇಂದ್ರ ಒಡೆಯರವರು.

ಶ್ರೀಮನ್ಮಹಾರಾಜ

# ಶ್ರೀ ಚಾಮರಾಜೇಂದ್ರ ಒಡೆಯರವರ

## ಉತ್ತರದೇಶ ಸಂಚಾರ

ಎಂ. ಶಿಂಗ್ರಯ್ಯನವರಿಂದ ರಚಿಸಲ್ಪಟ್ಟುದು.

ಮೈಸೂರು

ದಿ ಜನರಲ್ ಏಜನ್ಸಿ ಪ್ರೆಸ್

1909.